ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1213(1564)**

ಸದಸ್ಯರ ಹೆಸರು **ಶ್ರೀ ಶಿವಾನಂದ ಎಸ್ ಪಾಟೀಲ್ (ಬಸವನಬಾಗೇವಾಡಿ)**

ಉತ್ತರಿಸುವವರು **. ಶ್ರೀ ಕೆ ಎಸ್ ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು)**

ಅ) ವಿವಿಧ ನದಿಗಳಿಂದ ರಾಜ್ಯದಲ್ಲಿ ಸಿ ಡಬ್ಲ್ಯೂಸಿ(ಸೆಂಟ್ರಲ್)ಯಿಂದ ಹರಿವಿಕೆಯನ್ನು ಮೌಲ್ಯಮಾಪನ ಮಾಡತಕ್ಕಂತಹ ಕೇಂದ್ರಗಳು ಯಾವುವು? (ವಿವರ ನೀಡುವುದು)

ರಾಜ್ಯದಲ್ಲಿ ಸಿ ಡಬ್ಲ್ಯೂಸಿ ವತಿಯಿಂದ ಸುಮಾರು 43 ಕೇಂದ್ರಗಳಲ್ಲಿ ಮಾಪನ ಕಾರ್ಯ ನಿರ್ವಹಿಸುತ್ತಿದ್ದು, ವಿವರಗಳು ಕೆಳಕಂಡಂತಿವೆ –

ಕಾವೇರಿ ನದಿ ಕಣಿವೆ

1 ಅರ್ಕಾವತಿ ನದಿ–ಟಿ ಬೆಕುಪ್ಪೆ
2 ಶಿಂಷಾ ನದಿ–ಟಿ ಕೆ ಹಳ್ಳಿ
3 ಕಾವೇರಿ ನದಿ–ಕೊಳ್ಳೆಗಾಲ
4 ಕಬಿನಿ ನದಿ–ಟಿ ನರಸೀಪುರ
5 ಲಕ್ಷ್ಮಣ ತೀರ್ಥ ಹೊಳೆ–ಕಟ್ಟೆಮಳಲವಾಡಿ
6 ಹೇಮಾವತಿ ನದಿ–ಮುಕುಂದುರು ಹೊಸಹಳ್ಳಿ
7 ಯಗಚಿ ನದಿ–ತಿಮ್ಮನಹಳ್ಳಿ
8 ಹೇಮಾವತಿ ನದಿ–ಸಕಲೇಶಪುರ
9 ಕಾವೇರಿ ನದಿ–ಕೊಡಿಗೆ
10 ಹೇಮಾವತಿ ನದಿ–ಅಕ್ಕಿಹೆಬ್ಬಾಳ

ಕೃಷ್ಣಾ ನದಿ ಕಣಿವೆ

1 ಮುಲ್ಲಾಮಾರಿ ನದಿ–ಚಿಂಚೋಳಿ
2 ಕಾಗ್ನ ನದಿ–ಮಲಖೇಡ
3 ಭೀಮಾ ನದಿ–ಯಾದಗೀರ್
4 ಬೋರ್‌ನಾಳ ನದಿ–ಕೋಕನ್‌ಗಾಂವ್
5 ದೊಡ್ಡ ಹಳ್ಳ–ಶಿರಡಾಂನ್
6 ಘಟಪ್ರಭಾ ನದಿ–ಮುದೋಳ್
7 ಘಟಪ್ರಭಾ ನದಿ–ಗೋಕಾಕ್ ಫಾಲ್ಸ್
8 ಹಿರಣ್ಯಕೇಶಿ ನದಿ–ಗೋಟೂರು
9 ಘಟಪ್ರಭಾ ನದಿ–ದಡ್ಡಿ
10 ಮಲಪ್ರಭಾ ನದಿ–ಚೋಳಚಗುಡ್ಡ
11 ಬೆಣ್ಣೆ ಹಳ್ಳ–ನವಲಗುಂದ

12 ಢೋಣ ನದಿ–ತಾಳಿಕೋಟೆ
13 ಕೃಷ್ಣಾ ನದಿ–ಹೂವಿನಹೆಡಿಗೆ
14 ವೇದಾವದಿ ನದಿ–ಟಿ ರಾಮಪುರಂ
15 ತುಂಗಭದ್ರಾ ನದಿ–ಊಲೆನೂರು
16 ವರದಾ ನದಿ–ಮರೋಳ್
17 ತುಂಗ ಭದ್ರ ನದಿ–ಹಾರ್ಲ ಹಳ್ಳಿ
18 ತುಂಗ ಭದ್ರ ನದಿ–ಶಿವಮೊಗ್ಗ
19 ತುಂಗ ಭದ್ರ ನದಿ–ಹೊನ್ನಾಳಿ
20 ಚಿಕ್ಕಹಗರಿ ನದಿ–ಅಮಕುಂಡಿ ಸೇತುವೆ
21 ವೇದಾವತಿ ನದಿ–ಕೆಲ್ಲೋಡು
22 ದೂದ್‌ಗಂಗಾ ನದಿ–ಸದಲಗಾ
23 ಅಗ್ರಣಿ ನದಿ–ಪಾಂಡೇಗಾವ್
24 ಹರಿದ್ರಾ ನದಿ–ಬ್ಯಾಲದ ಹಳ್ಳಿ
25 ಕುಮುದ್ವತಿ ನದಿ–ಕುಪ್ಪೆಲೂರು

<u>ಗೋದಾವರಿ ನದಿ ಕಣಿವೆ</u> 1 ಮಾಪನ ಕೇಂದ್ರ

1 ಮಾಂಜ್ರ ನದಿ–ಸಾಯಿಗಾವ್

<u>ಪಶ್ಚಿಮ ವಾಹಿನಿ ನದಿಕೊಳ್ಳ</u> 6 ಮಾಪನ ಕೇಂದ್ರಗಳು

1 ಆಘನಾಶಿನಿ ನದಿ–ಸಂತೆಗುಳಿ
2 ಹಾಲಂಡಿ ನದಿ–ಹಾಲಂಡಿ
3 ಸೀತಾ ನದಿ–ಅವರ್ಸೆ
4 ಎಣ್ಣೆ ಹೊಳೆ–ಎಣ್ಣೆಹೊಳೆ
5 ಗುರ್‌ಪುರ್ ನದಿ–ಅಡ್ಡೂರು
6 ನೇತ್ರಾವತಿ ನದಿ–ಬಂಟ್ವಾಳ

<u>ಉತ್ತರ ಪೆನ್ನಾರ್ ನದಿ ಕಣಿವೆ</u> 1 ಮಾಪನ ಕೇಂದ್ರ ಉತ್ತರ

1 ಪಿನಾಕಿನಿ ನದಿ–ನಾಗಲಮಡಿಕೆ

ಆ) ಇವುಗಳಲ್ಲಿ ಎಷ್ಟು ಕೇಂದ್ರಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿವೆ ಹಾಗೂ ಎಷ್ಟು ಕೇಂದ್ರಗಳು ಕಾರ್ಯನಿರ್ವಹಿಸುತ್ತಿಲ್ಲ?

ಮೇಲೆ ಸೂಚಿಸಿರುವ ಎಲ್ಲಾ ಮಾಪನ ಕೇಂದ್ರಗಳಲ್ಲೂ ಮಾಪನ ಕಾರ್ಯಗಳು ಮುಂದುವರಿದಿರುವುದು ಕೇಂದ್ರ ಜಲ ಆಯೋಗದ ಜಲ ವಾರ್ಷಿಕೆಯಿಂದ ತಿಳಿದುಬಂದಿದೆ

ಇ) ರಾಜ್ಯದ ಕಾವೇರಿ ಕೊಳ್ಳ ಮತ್ತು ಕೃಷ್ಣಾ ಕೊಳ್ಳಗಳಿಂದ ನೆರೆ ರಾಜ್ಯಗಳಿಗೆ ಟ್ರಿಬ್ಯೂನಲ್ ಆದೇಶದ ಅನ್ವಯ ಕೊಡಬೇಕಾಗಿರುವ ನೀರಿನ ಮೊತ್ತವೆಷ್ಟು?

1) ಕೃಷ್ಣಾ ಕೊಳ್ಳ –

ಕೃಷ್ಣಾ ಕೊಳ್ಳದಿಂದ ನೀರನ್ನು ನೆರೆರಾಜ್ಯಗಲಿಗೆ ಕೊಡಲು ಯಾವುದೇ ಟ್ರಬ್ಯೂನಲ್‌ನ ಆದೇಶ ಇರುವುದಿಲ್ಲ

ii) ಕಾವೇರಿ ಕೊಳ್ಳ,–

ಕಾವೇರಿ ನ್ಯಾಯಾಧೀಕರಣದ ದಿನಾಂಕ 25 6 1991ರ ಮಧ್ಯಂತರ ಅದೇಶದನ್ವಯ ತಮಿಳುನಾಡಿನ ಮೆಟ್ಟೂರು ಜಲಾಶಯದಲ್ಲಿ ಪ್ರತಿ ಜಲವರ್ಷದಲ್ಲಿ 205 ಟಿ ಎಂ ಸಿ ನೀರು ಲಭ್ಯವಾಗುವಂತೆ, ಕರ್ನಾಟಕವು ತನ್ನ ಜಲಾಶಯಗಳಿಂದ ನೀರನ್ನು ಬಿಡುಗಡೆ ಮಾಡಬೇಕಾಗಿದೆ

ಕಾವೇರಿ ನ್ಯಾಯಾಧಿಕರಣದ ದಿನಾಂಕ 5 2 2007ರ ಅಂತಿಮ ಆದೇಶದನ್ವಯ, ತಮಿಳುನಾಡಿಗೆ ಪ್ರತಿ ಜಲವರ್ಷದಲ್ಲಿ 192 ಟಿ ಎಂ ಸಿ ನೀರು ಬಿಳಿಗುಂಡ್ಲು ಮಾಪನ ಕೇಂದ್ರದಲ್ಲಿ ಹರಿಯುವಂತೆ ಕರ್ನಾಟಕವು ತನ್ನ ಜಲಾಶಯಗಳಿಂದ ನೀರನ್ನು ಬಿಡುಗಡೆ ಮಾಡಬೇಕಾಗಿದೆ

ಈ) ಮೊತ್ತಕ್ಕಿಂತ ಹೆಚ್ಚಿಗೆ ಹರಿದು ಹೋಗಿರುವ ನೀರಿನ ಪ್ರಮಾಣ ಎಷ್ಟು?

(ಟಿ ಎಂ ಸಿ ಯಲ್ಲಿ) ಕಳೆದ 3 ವರ್ಷದ ನೀರಿನ ಅಂಕಿ ಸಂಖ್ಯೆಗಳ ವಿವರ ಒದಗಿಸುವುದು

i) ಕೃಷ್ಣಾ ಕೊಳ್ಳಕ್ಕೆ ಸಂಬಂಧಿಸಿದಂತೆ, ಇದು ಉದ್ಭವಿಸುವುದಿಲ್ಲ

ii) ಕಾವೇರಿ ಕೊಳ್ಳ –

1991–92 ಜಲ ವರ್ಷದಿಂದ 2005–06ರವರೆಗೆ ತಮಿಳುನಾಡಿನ ಮೆಟ್ಟೂರು ಜಲಾಶಯದಲ್ಲಿ ನ್ಯಾಯಮಂಡಳಿಯ ಮಧ್ಯಂತರ ಅದೇಶದಲ್ಲಿ ನಿಗದಿಪಡಿಸಿದ ಪ್ರಮಾಣಕ್ಕಿಂತ ಹೆಚ್ಚುವರಿ ನೀರು ಹರಿದಿರುವ ಜಲವರ್ಷಗಳು ಹಾಗೂ ನೀರಿನ ಪ್ರಮಾಣವನ್ನು ಅನುಬಂಧ 1ರಲ್ಲಿ ನೀಡಲಾಗಿದೆ ಕಳೆದ ಮೂರು ವರ್ಷಗಳಿಂದ ಅಂದರೆ 2003–04 ರಿಂದ 2005–06ರವರೆಗೆ ಹರಿದಿರುವ, ನೀರಿನ ಪ್ರಮಾಣವನ್ನು ಅನುಬಂಧ 2ರಲ್ಲಿ ನೀಡಲಾಗಿದೆ

ಅನುಬಂಧ–1

ವಿಧಾನ ಸಭೆಯ ಸದಸ್ಯರಾದ ಮಾನ್ಯ ಶ್ರೀ ಶಿವಾನಂದ ಎಸ್ ಪಾಟೀಲ್ (ಬಸವನ ಬಾಗೇವಾಡಿ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂ 1564ಕ್ಕೆ ಉತ್ತರಗಳು

ಜಲ ವರ್ಷ	* ಮೆಟ್ಟೂರು ಜಲಾಶಯಕ್ಕೆ ಹರಿದಿರುವ ನೀರಿನ ಪ್ರಮಾಣ (ಟಿ ಎಂ ಸಿ ಗಳಲ್ಲಿ)	ನ್ಯಾಯಾಧಿಕರಣದ ಆದೇಶದ ಅನ್ವಯ ನಿಗದಿ ಪಡಿಸಿದ ನೀರಿನ ಪ್ರಮಾಣ (ಟಿ ಎಂ ಸಿ ಗಳಲ್ಲಿ)	ನಿಗದಿತ ಮೊತ್ತಕ್ಕಿಂತ ಹೆಚ್ಚಿಗೆ ಮೆಟ್ಟೂರು ಜಲಾಶಯಕ್ಕೆ ಹರಿದಿರುವ ನೀರಿನ ಪ್ರಮಾಣ (ಟಿ ಎಂ ಸಿ ಗಳಲ್ಲಿ)
1991–1992	334 096	205 00	129 96

1992–1993	351 693	205 00	146 69
1993–1994	233 371	205 00	18 37
1994–1995	373 157	205 00	168 16
1996–1997	244 064	205 00	39 06
1997–1998	267 836	205 00	62 84
1998–1999	237 682	205 00	32 68
1999–2000	268 594	205 00	65 59
2000–2001	308 227	205 00	103 23
2005–2006	401 843	205 00	196 84

*ತಮಿಳುನಾಡಿನವರು ವರದಿ ಮಾಡಿದಂತೆ

ಅನುಬಂಧ–2

ವಿಧಾನ ಸಭೆಯ ಸದಸ್ಯರಾದ ಮಾನ್ಯ ಶ್ರೀ ಶಿವಾನಂದ ಎಸ್ ಪಾಟೀಲ್ (ಬಸವನ ಬಾಗೇವಾಡಿ)ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂ 1564ಕ್ಕೆ ಉತ್ತರಗಳು

ಕ್ರಮ ಸಂಖ್ಯೆ	ಜಲ ವರ್ಷ	ಕೆಆರ್ ಎಸ್ ಹಾಗೂ ಕಬಿನಿ ಜಲಾಶಯಗಳ ಹೊರ ಹರಿವು (ಟಿಎಂಸಿಗಳಲ್ಲಿ)	ಬಿಳಿಗುಂಡ್ಲು ಮಾಪನ ಕೇಂದ್ರ ಗಳಲ್ಲಿ ದಾಖಲಾದ ಹರಿವು (ಟಿಎಂಸಿಗಳಲ್ಲಿ)	ಮೆಟ್ಟೂರು ಜಲಾಶಯದಲ್ಲಿ ದಾಖಲಾದ ಒಳಹರಿವು (ಟಿಎಂಸಿಗಳಲ್ಲಿ)
1	2003–04	42 034	75,869	65 160
2	2004–05	101 298	185 548	163 172
3	2005–06	204 285	383 921	401 843

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1214(1565)**

ಸದಸ್ಯರ ಹೆಸರು **ಶ್ರೀ ಶಿವಾನಂದ ಎಸ್ ಪಾಟೀಲ್ (ಬಸವನಬಾಗೇವಾಡಿ)**

ಉತ್ತರಿಸುವವರು **ಶ್ರೀ ಡಿ ಹೆಚ್ ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು)**

ಅ) ಮುಂದಿನ ವರ್ಷದಿಂದ ಪ್ರತಿ ತಾಲ್ಲೂಕು ಕೇಂದ್ರಗಳಿಗೆ ಒಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ತೆರೆಯುವ ಯೋಚನೆ ಸರ್ಕಾರದ ಮುಂದಿದೆಯೇ?

ಹೌದು

ಆ) ಹಾಗಾದರೆ, ಮುಂದಿನ ವರ್ಷ ಒಟ್ಟು ಎಷ್ಟು ಹೊಸ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ತೆರೆಯಲು ಉದ್ದೇಶಿಸಲಾಗಿದೆ?